ಅಧ್ಯಕ್ಷರು: ನೀವು ಫೋಟೋವನ್ನು ತೆಗೆದುಕೊಳ್ಳಬೇಡಿ, ಈ ರೀತಿಯಾಗಿ ವಾಕ್‌ಔಟ್ ಮಾಡಿರುವ ಬಗ್ಗೆ ನೀವು ಫೋಟೋಗಳನ್ನು ತೆಗೆದುಕೊಂಡು ಮಾಡಿರುವುದಕ್ಕಾಗಿಯೇ ಅರ್ಧ ವಾಕ್‌ಔಟ್ ಜಾಸ್ತಿಯಾಗಿದೆ. ನಾನು Photographers ಗಳಿಗೆ ಒಂದು ಸೂಚನೆಯನ್ನು ಕೊಡುತ್ತೇನೆ. ದಯಮಾಡಿ ಯಾರು walk out ಮಾಡುತ್ತಾರೆ, ಅವರ Photo ಗಳನ್ನು ತೆಗೆದುಕೊಳ್ಳಬಾರದು. ಮಾನ್ಯ ದಿನೇಶ್‌ಗುಂಡೂರಾವ್‌ರವರೆ ತಾವು ಹೇಳಿ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾಧ್ಯಕ್ಷರ ಪೀಠದ ಕೆಳಗಡೆ ಧರಣಿ ಕುಳಿತುಕೊಂಡರು)

ಅಧ್ಯಕ್ಷರು: ಈಗ ದಿನೇಶ್ ಗುಂಡೂರಾವ್ ಮಾತನಾಡಿ.

( ) ವಿಷಯ: ಕೆ.ಪಿಎಸ್.ಸಿ. ಮೂಲಕ ಆಗುತ್ತಿರುವ ನೇಮಕಾತಿಯ ವಿಳಂಬ ಕುರಿತು.

ಶ್ರೀ ದಿನೇಶ್ ಗುಂಡೂರವ್:– KPSC ಮೂಲಕ ಏನು recruitment ಆಗಬೇಕಾಗಿದೆ ಮಾನ್ಯ ಅಧ್ಯಕ್ಷರೇ, ಪ್ರತಿ ವರ್ಷವೂ ಕೂಡ..

(ಗೊಂದಲ)

ಅಧ್ಯಕ್ಷರು: ಸಂಪ್ರದಾಯ ಕೆಲವೊಂದು ಸಲ ಸದನದ ಮರ್ಯಾದೆಯನ್ನು ಸಹ ಕಾಪಾಡಬೇಕಲ್ಲವೇ?

ಶ್ರೀ ಕೆ.ಶ್ರೀನಿವಾಸಗೌಡ:– ಮಾನ್ಯ ಅಧ್ಯಕ್ಷರೇ, ಇಲ್ಲಿ ಒಂದು ನಿಮಿಷ ತಾವು ಕೇಳಬೇಕು. ಇವತ್ತು ವಾಟಾಳ್ ನಾಗರಾಜ್‌ರವರಿಗೆ ಆಗಿರಬಹುದು. ನಾಳೆ ನಮಗೂ ಆಗಬಹುದು. ನೀವು ಈ ರೀತಿಯ ನಿಯಂತ್ರಣವನ್ನು ಮಾಡಿದರೆ..

ಅಧ್ಯಕ್ಷರು: ಹೌದು, No,No, ಈ ರೀತಿ ಇವರು ಮಾಡುವುದನ್ನೆಲ್ಲಾ ಪತ್ರಿಕೆಯವರು ವರದಿ ಮಾಡುತ್ತಾರೆ. ಆದರೆ ಫೋಟೋ ತೆಗೆಸಿಕೊಳ್ಳುವುದು ಸರಿಯಲ್ಲ.

ಶ್ರೀ ಕೆ.ಶ್ರೀನಿವಾಸಗೌಡ:– ದಯವಿಟ್ಟೂ ಪ್ರಜಾಪ್ರಭುತ್ವದಲ್ಲಿ ಇವೆಲ್ಲ ಪ್ರತಿಯೊಂದಕ್ಕೂ ಕೂಡ ಅವಕಾಶಗಳಿವೆ. ಆದರೆ ತಾವು ಒಬ್ಬ dictator ಆಗಿ ವರ್ತಿಸುತ್ತೇವೆಂದರೆ, ವಾಟಾಳ್ ನಾಗರಾಜ್‌ರವರು ಫೋಟೊ ತೆಗೆಸಿಕೊಳ್ಳುವುದು, ಇನ್ನೊಂದು ಅದು ಸಾರ್ವಜನಿಕವಾಗಿ ಪ್ರಚಾರವಾಗಬೇಕಾಗುತ್ತದೆ. ನೀವು ಅದನ್ನು ನಿಯಂತ್ರಿಸುವುದು ಸರಿ ಕಾಣುತ್ತಿಲ್ಲ.

(ಗೊಂದಲ)

ಅಧ್ಯಕ್ಷರು: ಆಯಿತು. ನೀವು ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದೇನೆ. ಎಲ್ಲ ಆಯಿತು.

ಶ್ರೀ ಕೆ.ಶ್ರೀನಿವಾಸಗೌಡ:– ನೀವು ಈ ರೀತಿ ಸಿಟ್ಟು ಮಾಡಿಕೊಳ್ಳುವುದು, ಪತ್ರಿಕೆಯವರಿಗೆ, ಮಾಧ್ಯಮದವರಿಗೆ ಈ ರೀತಿ ಹೇಳುವುದು ಸರಿಯಲ್ಲ. ನಾಳೆ ನಮಗೂ ಈ ರೀತಿ ಆಗಬಹುದು. ನಾಳೆ ನೀವು ಇಲ್ಲಿ ಕುಳಿತಾಗ ನಮಗೂ ಈ ರೀತಿ ಆಗಬಹುದು. ಇದನ್ನು ನಾವು ನೇರವಾಗಿ ನಾವು ಮಾತನಾಡಬೇಕಾಗುತ್ತದೆ. ಅವಕಾಶ ಕೊಡದೆ ನೀವು ಈ ರೀತಿ ಮಾಡಿದರೆ ಇದು ಯಾವ ನ್ಯಾಯ? ನಾವು ಮಾತನಾಡುತ್ತಿದ್ದರೆ ನೀವು ಹೀಗೆ ಮಾಡಿದರೆ.. ಹಾಗಾದರೆ ನೀವು ಮಾಡಿ.

(ಗೊಂದಲ)

ಅಧ್ಯಕ್ಷರು: ಪದೇ ಪದೇ walk out ಜಾಸ್ತಿಯಾಗಿ ಹೋಯಿತು. ಎಷ್ಟು ಸಾರಿ walk out ಮಾಡುತ್ತೀರಿ?

ಶ್ರೀ ಎನ್.ಧರಂಸಿಂಗ್(ಪ್ರತಿ ಪಕ್ಷದ ನಾಯಕರು):– ವಾಟಾಳ್ ನಾಗರಾಜ್‌ರವರು ತಮ್ಮಷ್ಟಕ್ಕೆ ತಾವು ಹೋಗುತ್ತಿದ್ದರು. ತಾವು ಪೋಟೋ ತೆಗೆಸಿಕೊಳ್ಳುವುದು ದೊಡ್ಡ ತಪ್ಪೇ ಅಧ್ಯಕ್ಷರೇ. ವಾಟಾಳ್ ನಾಗರಾಜ್‌ರವರೇ ಆಯಿತು ಬಿಡಿ.

ಅಧ್ಯಕ್ಷರು: ನಾನು ಹೇಳಿದ್ದೂ ಏನೆಂದರೆ ಎಲ್ಲೋ ಒಂದು ಸಮಯದಲ್ಲಿ walk out ಮಾಡುತ್ತಾರೆ? ವಾಟಾಳ್ ನಾಗರಾಜ್‌ರವರು ಎಷ್ಟು ಸಾರಿ walk out ಮಾಡುತ್ತಾರೆ? ಆಯಿತು, ಬಿಡಿ, ನನ್ನದೇನು ಅಭ್ಯಂತರವಿಲ್ಲ, ಆದರೆ walk out ಜಾಸ್ತಿ ಮಾಡಬೇಡಿ. ಇನ್ನು ಮೇಲೆ ವಾಟಾಳ್ walk out ಬಂದ್. ಆಯಿತು ನಡೆಯಿರಿ.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಸದನದಿಂದ ಹೊರ ನಡೆದರು)

ಶ್ರೀ ಬಿ.ಆರ್.ಪಾಟೀಲ್:– ಮಾನ್ಯ ಅಧ್ಯಕ್ಷರೇ, ನಾನು ಕೂಡ ಮೇಲ್ಮನೆಯಲ್ಲಿ ಸಭಾಪತಿಯಾಗಿ ಕೆಲಸ ಮಾಡುವಂಥ ಸಂದರ್ಭದಲ್ಲಿ ಮೂರು

ಸಲ ನನ್ನ ರಾಷ್ಟ್ರಮಟ್ಟದ ಪೀಠಾಧಿಕಾರಿಗಳ ಸಭೆಯಲ್ಲಿ ಬಹಳ ಗಂಭೀರವಾಗಿ ಇಂತಹ ವಿಷಯಗಳ ಬಗ್ಗೆ ಚರ್ಚೆ ಆಯಿತು. ಬಹುಶಃ ಅನೇಕ ಸದನದ ಸಭೆಗಳಿಗೆ ತಾವು ಸಹ ಹೋಗಿಬರಬಹುದು. ಈ ಸದನದ ಗಾಂಭೀರ್ಯತೆ, ಘನತೆಯನ್ನು ಕಾಪಾಡಬೇಕಾಗಿದ್ದರೆ ಇಂಥ ವಿಷಯಗಳ ಕಾರಣಕ್ಕಾಗಿಯೇ ಅನೇಕ ಸದಸ್ಯರು ಅಧ್ಯಯನ ಮಾಡಿ ಒಳ್ಳೆಯ ವಿಷಯಗಳನ್ನು ಪ್ರಸ್ತಾಪ ಮಾಡುತ್ತಾರೆ, ಅದು ಪತ್ರಿಕೆಗಳಲ್ಲಿ ಬರಲಿಕ್ಕೆ ಸಾಧ್ಯವಾಗುತ್ತಿಲ್ಲ. ಅಥವಾ ಅದಕ್ಕೆ ಪ್ರಚಾರ ಸಿಗುತ್ತಿಲ್ಲ, ಚರ್ಚೆ ಆಗುತ್ತಿಲ್ಲ. ಈ ಕಾರಣಕ್ಕಾಗಿ ಈ ಬಂದ್ ಅನ್ನು ಕೂಡ ಮಾಡಬೇಕೆಂಬ ಮಾತನ್ನು ಅಂದು ಶ್ರೀ ಶಿವರಾಜ್ ಪಾಟೀಲ್‌ರವರು ಲೋಕಸಭೆಯ ಅಧ್ಯಕ್ಷರಾಗಿದ್ದಾಗ ಇದರ ಬಗ್ಗೆ ಅನೇಕ ಸಲ ನಾವು ನಿರ್ಣಯವನ್ನು ಮಾಡಿದ್ದೇವೆ. ಈಗ ತಾವು ಇವತ್ತು ಏನೊಂದು ಮಾತನ್ನು ಹೇಳಿದಿರಿ, ಇದೇನಾಗುತ್ತಿದೆ ಎಂದರೆ, ಬರೆ ನಾಳೆ ಪತ್ರಿಕೆಯಲ್ಲಿ ಬಂದು ನಾವು ಖುಷಿಪಡುವಂತಾಗುತ್ತದೆ. ಹೊರತಾಗಿ ಅನೇಕ ಸದನದ ಬಹಳ ಮುಖ್ಯವಾದಂಥ ಕಲಾಪಗಳ ಹಿಂದೆ ಸರಿದು ನಮ್ಮ ಜನರಿಗೆ ನ್ಯಾಯ ಕೊಡಸಲಿಕ್ಕೆ ನಮಗೆ ಸಾಧ್ಯವಾಗುತ್ತಿಲ್ಲ. ಹಾಗಾಗಿ ತಾವು ಏನು ಇವತ್ತು ಒಂದು ದಿಟ್ಟವಾದ ನಿರ್ಣಯವನ್ನು ತೆಗದುಕೊಂಡಿರುವಿರಿ, ದಯಮಾಡಿ ಅದೇ ರೀತಿ ಇನ್ನು ಅನೇಕ ವಿಷಯಗಳ ಬಗ್ಗೆ ಈಗ ಯಾರೊಬ್ಬರೂ ನಿಮ್ಮ ಒಪ್ಪಿಗೆ ಇಲ್ಲದೇನೆ ಮಾತನಾಡಲಿಕ್ಕೆ ನಿಂತರೆ ತಾವು ನೇರವಾಗಿ ಹೇಳಬಹುದು. "ಯಾವುದೇ ಒಂದು ಶಬ್ಧವು ಸಹ ಕಡತಕ್ಕೆ ಹೋಗುವುದಿಲ್ಲ" ಎಂದು ಹೇಳಿದರೆ ನಾವ್ಯಾರು ಕೂಡ ಮಾತನಾಡುವುದಿಲ್ಲ. ಇಲ್ಲದಿದ್ದರೆ ನಿಮ್ಮ ಅನುಮತಿ ಇಲ್ಲದೆ ಹತ್ತಾರು ಜನರು ಮಾತನಾಡುತ್ತಾರೆ. ಪಾಪ, ರೆಕಾರ್ಡ್ ಮಾಡುವವರಿಗೆ ಯಾವುದೇ ವಿಷಯವನ್ನು ಸರಿಯಾಗಿ ದಾಖಲು ಮಾಡಲಿಕ್ಕಾಗುವುದಿಲ್ಲ. ತಾವು ಸ್ವಲ್ಪ ಯಾರಿಗೆ, ತಜ್ಞರ ಹಿಂದೆ ಬಂದು ಕುಳಿತಂತಹ ಅನೇಕ ಜನರಿಗೆ ಅವಕಾಶವೇ ಸಿಗುವುದಿಲ್ಲ. ಪಾಪ, ನಿನ್ನೆ ಕೊನೆಯ ಸಾಲಿನಲ್ಲಿ ಕುಳಿತವರು ಬಹಳ ಚೆನ್ನಾಗಿ ಮಾತನಾಡಿದರು, ನಾನು ನಿನ್ನೆ ರಾತ್ರಿ ಟಿ.ವಿ.ಯಲ್ಲಿ ನೋಡಿದೆ. ಹಾಗಾಗಿ ಅನೇಕ ಜನರು ವಂಚಿತರಾಗುತ್ತಿದ್ದಾರೆ. ಇವತ್ತು ಕೊನೆಯ ದಿವಸ, ಮುಂದಿನ ಸಭೆ ನಡೆಸುವಾಗ ಇವತ್ತು ಏನು ನಿರ್ಣಯವನ್ನು ತೆಗೆದುಕೊಂಡಿದ್ದೀರಿ, ಅದಕ್ಕೆ ಬದ್ಧರಾಗಿದ್ದು, ಪೀಠಾಧಿಕಾರಿಗಳ ಸಭೆಯಲ್ಲಿ ಈ ಬಗ್ಗೆ ನಿರ್ಣಯವಾಗಿದೆ. ನಮ್ಮಲ್ಲಿ ಪತ್ರಿಕೆಗಳು ಕೂಡ ಪ್ರಚೋದನಾಕಾರಿಯಾಗಿ ಈ ನಮ್ಮ ಕ್ರಮಗಳಿಗೆ ಪ್ರಚಾರ ಕೊಟ್ಟು ಅತ್ಯಂತ ಬಹುಮುಖವಾದ ಮುಖ್ಯವಾದಂಥ ವಿಷಯಗಳನ್ನು ಅವರು ಬರೆಯುವುದೇ ಇಲ್ಲ. ಈ ಕಾರಣಕ್ಕಾಗಿಯೇ ನಮಗೆ ಇನ್ನು ಪ್ರಚೋದನೆ

ಸಿಗುತ್ತಿದೆ, ದಯಮಾಡಿ ಇಂಥ ನಿರ್ಣಯಗಳನ್ನು ತಾವು ಗಟ್ಟಿಯಾಗಿ ಮಾಡಬೇಕು.

ಅಧ್ಯಕ್ಷರು: ಈಗ Ethics Committee ನಮ್ಮಲ್ಲಿಲ್ಲ. Ethics Committee ಯನ್ನು ಮಾಡುತ್ತಿದ್ದೇವೆ. ಆ Ethics Committee ರಚನೆ ಆಗಿ ಅವರು ನೀಡುವ ರಿಪೋರ್ಟ್ ಆಧಾರದ ಮೇಲೆ ನಾನು ಇದನ್ನು ಪರಿಗಣಿಸುತ್ತೇನೆ. ಈಗ ದಿನೇಶ್ ಮಾತನಾಡಿ.

ಶ್ರೀ ದಿನೇಶ್ ಗುಂಡೂರಾವ್:–ಮಾನ್ಯ ಅಧ್ಯಕ್ಷರೇ, ಈಗ ಕೆ.ಪಿ.ಎಸ್.ಸಿ. ಮೂಲಕ ಪ್ರತಿ ವರ್ಷವೂ ಕೂಡ ಅಧಿಸೂಚನೆ ಹೊರಡಿಸಿ ನೇಮಕಾತಿ ಮಾಡುವ ಕ್ರಮ ಇದೆ. ಕರ್ನಾಟಕದಲ್ಲಿ ಬಹುಶಃ ಪ್ರತಿ ವರ್ಷವೂ ಆ recruitment ಆಗುತ್ತಿಲ್ಲ. ಇವತ್ತು ಯು.ಪಿ.ಎಸ್.ಸಿ. ಇರಬಹುದು ಅಥವಾ ಬೇರೆ ಬೇರೆ ರಾಜ್ಯಗಳಿಗಿರಬಹುದು, ಅಲ್ಲಿ ಪ್ರತಿ ವರ್ಷವೂ ಕೂಡ ಯಾವುದೇ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವಂಥ ಪ್ರಕ್ರಿಯೆ ನಡೆಯುತ್ತದೆ. ಈಗಲೂ ಸಹ ನಮ್ಮಲ್ಲಿ ಸಾಕಷ್ಟು ಕೆ.ಎ.ಎಸ್. ಹುದ್ದೆಗಳು class-1 ಹುದ್ದೆಗಳು, ಖಾಲಿ ಇವೆ, ಇವತ್ತು 150 EO ಹುದ್ದೆಗಳು ಖಾಲಿ ಇವೆ. KAS ಹುದ್ದೆಗಳು ಕೂಡ ಖಾಲಿಯಿವೆ. ಎಲ್ಲವನ್ನು ಭರ್ತಿ ಮಾಡತಕ್ಕಂಥ ಪ್ರಕ್ರಿಯೆಯನ್ನು ಈ ಸರ್ಕಾರ ಈ ವರ್ಷ ಮಾಡಿಲ್ಲ, ಅದುದರಿಂದ ಸರ್ಕಾರ ಈ ವರ್ಷ ಈ ಹುದ್ದೆಗಳನ್ನು ಭರ್ತಿ ಮಾಡ ತಕ್ಕಂಥ ಪ್ರಕ್ರಿಯೆಯನ್ನು ಮಾಡುವಿರಾ ಅಥವಾ ಯಾವಾಗ ಅಧಿಸೂಚನೆಯನ್ನು ಹೊರಡಿಸುವಿರಿ ಎಂದು ಬಹಳ ಸ್ಪಷ್ಟವಾದ ಉತ್ತರವನ್ನು ಸರ್ಕಾರ ಕೊಡಬೇಕೆಂದು ತಮ್ಮ ಮೂಲಕ ಕೇಳುತ್ತಿದ್ದೇನೆ.

ಅಧ್ಯಕ್ಷರು: ಕೆ.ಪಿ.ಎಸ್.ಸಿ. ನೇಮಕಾತಿ ಬಗ್ಗೆ ಕೇಳುತ್ತಿದ್ದಾರೆ, ಉಪಮುಖ್ಯಮಂತ್ರಿಗಳು ಹೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ(ಮಾನ್ಯ ಉಪ ಮುಖ್ಯಮಂತ್ರಿ):– ಸನ್ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳೊಡನೆ ಮಾತನಾಡಿ ಅದಕ್ಕೆ ಸರಿಯಾದಂಥ ಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಹಾಗೂ ಅವರಿಗೆ ಉತ್ತರ ಕೊಡಿಸುವಂಥ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಹೆಚ್.ಸಿ.ಮಹದೇವಪ್ಪ:– ಸನ್ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು:–ನಿಮ್ಮದೇನು ಕಳುಹಿಸಿಲ್ಲವಲ್ಲ.